

ತನು ಶ್ರಮ ಮರೆತದ ದುಡಿತ

## ಚಿತ್ರ ತಂದ ಸುದ್ದಿ

ಊರಿನ ಬಳ್ಳಕ್ಕದ ಗುಡ್ಡೆ. ರಸ್ತೆ ಪಕ್ಕ ಹತ್ತಾರು ವಿದ್ಯಾರ್ಥಿಗಳ ಕೈಯಲ್ಲಿ ಸ್ಮಾರ್ಟ್‌ಫೋನ್. ಮಳೆಯೊಂದಿಗೆ ಗಾಳಿ ಚೆನ್ನಾಗಿ ಬೀಸುತ್ತಿತ್ತು. ಹತ್ತರ ವಿದ್ಯಾರ್ಥಿ ಬಿಂದು ಆನ್‌ಲೈನ್ ತರಗತಿಯಲ್ಲಿದ್ದಾಳೆ. ನೋಟ್ಸ್ ಡೌನ್‌ಲೋಡ್ ಆಗದೆ ಒದ್ದಾಡುತ್ತಿದ್ದಾಳೆ. ಮಗಳು ಮಳೆಯಿಂದ ಒದ್ದೆಯಾಗದಂತೆ ತಂದೆ ನಾರಾಯಣ ಗೌಡರು ಛತ್ರಿ ಹಿಡಿದು ರಕ್ಷಿಸುತ್ತಿದ್ದಾರೆ. ನೆಟ್ ಕೈಕೊಟ್ಟಾಗ ಪಾಠ ಅರ್ಧದಲ್ಲೇ ನಿಲ್ಲುತ್ತದೆ. ಅವಳ ಕಣ್ಣುಗಳು ಒದ್ದೆಯಾಗುತ್ತವೆ.



ದೇಶದ ಗಮನ ಸೆಳೆದ ಚಿತ್ರ

ಮಹೇಶರ ಕ್ಯಾಮೆರಾದಲ್ಲಿ ಈ ಚಿತ್ರವು ಸೆರೆಯಾಗಿ ಜಾಲತಾಣದಲ್ಲಿ ಹರಿದಾಡಿತು. ಶಿಕ್ಷಣ ಮಂತ್ರಿಗಳ ಗಮನಸೆಳೆಯಿತು. ರಾಷ್ಟ್ರೀಯ ಮಾಧ್ಯಮಗಳು ಪ್ರಸಾರ ಮಾಡಿದುವು. ಒಂದೇ ದಿನದಲ್ಲಿ ಬಿಂದು ಸುದ್ದಿಯಾದಳು. ಈ ಸುದ್ದಿಯು ಅವಳಿಗೆ ಖುಷಿ ತಂದಿಲ್ಲ. ಆದರೆ ಹಳ್ಳಿಯ ದನಿಗೆ ಮಾಧ್ಯಮಗಳು ಗೌರವ ನೀಡಿದುವು. ಇದು ಬಿಂದು ಒಬ್ಬಳ ಕಥೆಯಲ್ಲ. ಕನ್ನಾಡಿನ ನೂರಾರು ಹಳ್ಳಿಗಳ ಕತೆ–ವ್ಯಥೆ. ದೇವರನ್ನು ಹುಡುಕುವಂತೆ ನೆಟ್‌ವರ್ಕ್ ಹುಡುಕುವ ಯುವ ಮನಸ್ಸುಗಳ ತುಮುಲ ಮಾತಾಗುವುದಿಲ್ಲ.



### ಲೀಡರ್‌ಗಳ ಸೃಷ್ಟಿ ಇಲ್ಲಾಗುತ್ತಿದೆ!



ಮಹೇಶ್ ಪುಚ್ಚಪ್ಪಾಡಿ ಕಮಿಲ ನಿವಾಸಿ. ಪತ್ರಿಕೆಗಳಲ್ಲಿ, ವಾಹಿನಿಗಳಲ್ಲಿ ಪತ್ರಕರ್ತರಾಗಿ ಅನುಭವಿ. ಮೂಲತಃ ಕೃಷಿಕ. ಈ ಹಳ್ಳಿಯ ಆಂದೋಲನದ ತಂಗಾಳಿಯು ಮಾಧ್ಯಮ ಲೋಕದಲ್ಲಿ ಪಸರಿಸಲು ಕಾರಣರು. ಮೂಲಭೂತ ಸಮಸ್ಯೆಗಳ ಪರಿಹಾರಕ್ಕೆ ಹಳ್ಳಿ ಮನಸ್ಸುಗಳನ್ನು ಕಟ್ಟಿದರು. ಮಹೇಶ್ ಹೇಳುತ್ತಾರೆ, 'ಗ್ರಾಮ ಭಾರತ ತಂಡಕ್ಕೆ ಪದಾಧಿಕಾರಿಗಳಿಲ್ಲ. ಬೋರ್ಡ್ ಇಲ್ಲ. ವಿಸಿಟಿಂಗ್ ಕಾರ್ಡ್ ಇಲ್ಲ. ನಾನು ಲೀಡರ್ ಅಲ್ಲ. ಲೀಡರ್‌ಗಳನ್ನು ಸೃಷ್ಟಿ ಮಾಡುವ ಕೆಲಸ ಇಲ್ಲಿ ಆಗುತ್ತಿದೆ'.

ಸಾರ್ವಜನಿಕರ ಒದ್ದಾಟಕ್ಕೆ ಸುಳ್ಯದ ಸಾಯಿರಂಜನ್ ಕಲ್ಚಾರು, ಸದಾಶಿವ ಕೊಡಪ್ಪಾಲ, ಶ್ರೀನಿವಾಸ ಉಬರಡ್ಕ ಮರುಗಿದರು. ವೈಫೈ ಸಂಪರ್ಕಕ್ಕಾಗಿ ಇಲಾಖೆಯಿಂದ ಅನುಮತಿ ಪಡೆದರು. ಬಿಎಸ್‌ಎನ್‌ಎಲ್‌ನಿಂದ ಏರ್‌ಫೈಬರ್ ಮೂಲಕ ನೆಟ್ ಪಡೆದು, ಪ್ರತ್ಯೇಕ ಡಿವೈಸ್ ಮೂಲಕ ವೈಫೈ ಒದಗಿಸುವುದು. 'ಸ್ವಲ್ಪ ಖರ್ಚು ಬೀಳುವ ಕೆಲಸವಾದ್ದರಿಂದ ವೈಫೈಗೆ ಶುಲ್ಕವಿದೆ. ಕಮಿಲ ಸುತ್ತಮುತ್ತ ಎರಡು ಸಾವಿರ ಚದರ ಅಡಿ ಸುತ್ತಳತೆಯಲ್ಲಿ ಸಿಗ್ನಲ್ ಲಭ್ಯ. ತುರ್ತು ವೈಫೈ ಅಪೇಕ್ಷಿತರಿಗೆ ಅನುಕೂಲ' ಎಂದರು ಮಹೇಶ್.

### ಸಮುದಾಯ ಸುಖ

ವಾರ್ಡಿನ ಹದಿನೆಂಟು ಮನೆಗಳಲ್ಲಿ ಕೊರೊನಾ ಸೋಂಕಿತರಿದ್ದರು, ಪಾಸಿಟಿವ್ ಅಂದಾಗ ಜನರು ದೂರ ಓಡಿ ಹೋಗುವುದು, ಮುಖ ಸಿಂಡರಿಸುವುದು ಸೋಂಕು ತಂದಿತ್ತ ಮನಸ್ಥಿತಿ. ಗ್ರಾಮ ಭಾರತದ ಸದಸ್ಯರು ಸೋಂಕಿತರ ಹಾಗೂ ಸೋಂಕಿನಿಂದ ಮುಕ್ತರಾದವರ ಮನೆಗೆ ತೆರಳಿ ಮಾನಸಿಕ ಧೈರ್ಯವನ್ನು ತುಂಬಿದರು. ದಾನಿಗಳ ನೆರವಿನಿಂದ ಜೀನಸು, ಔಷಧಗಳನ್ನು ಒದಗಿಸಿದರು.

ಸ್ಥಳೀಯ ದಲಿತ ಕಾಲನಿಯ ನಿವಾಸಿಗಳು ಕುಡಿಯುವ ನೀರಿಗಾಗಿ ಕಷ್ಟಪಡುತ್ತಿದ್ದರು. ಹತ್ತಿರದ ಕೆರೆ, ಬಾವಿಗಳನ್ನು ಅವಲಂಬಿಸಬೇಕಾಗಿತ್ತು. ಈ ವಿಚಾರವು ಪತ್ರಿಕೆಯಲ್ಲಿ ಪ್ರಕಟವಾಯಿತು. ಪಂಚಾಯತ್ ಸದಸ್ಯರು ಸಭೆಯಲ್ಲಿ ಆಗ್ರಹಿಸಿದರು. ಪರಿಣಾಮ, ಪಂಚಾಯತ್ ಕೊಳವೆ ಬಾವಿಯನ್ನು ಕೊರೆದು ನೀರಿನ ಬವಣೆಯನ್ನು ತೊಲಗಿಸಿತು. ಇವೆಲ್ಲದರ ಹಿಂದಿನ ಗ್ರಾಮ ಭಾರತದ ಅಜ್ಞಾತ ಶ್ರಮ ಗುರುತರ.

ರಸ್ತೆ ದುರಸ್ತಿಗಾಗಿ ಹಳ್ಳಿ ಕಾಯುತ್ತಿದೆ. ಸಂಚಾರದ ಸುಗಮತೆಗಾಗಿ ನಾಲ್ವರು ಪಂಚಾಯತ್ ಸದಸ್ಯರು ತಮಗೆ ಸಿಗುವ ಕಿಂಚಿತ್ ಮಾಸಿಕ ಸಂಭಾವನೆಯನ್ನು ಒಟ್ಟುಸೇರಿಸಿ ಮಾರ್ಗದ ಹೊಂಡಗುಂಡಿಗಳನ್ನು ಮುಚ್ಚುವ ಯೋಚನೆ ಮಾಡಿದ್ದಾರೆ!

### ಕನಸು ನನಸಾದ ಕ್ಷಣ

ಪಕ್ಷದ ಬ್ಯಾನರ್ ಇಲ್ಲದೆ, ಇಚ್ಛಾಶಕ್ತಿಯ ಮತ್ತು ಯುವಶಕ್ತಿಯ ಬಲದೊಂದಿಗೆ ರೂಪುಗೊಂಡ ಗ್ರಾಮ ಭಾರತ ತಂಡದ ಕನಸು ಗಾಂಧೀಜಿಯವರ ಕಲ್ಪನೆಗೆ ಸರಿಹೊಂದುತ್ತದೆ. 'ನಮ್ಮದು ಆಶಾವಾದದ ಕಣ್ಣುಗಳಿಗೆ, ಮನಸ್ಸುಗಳಿಗೆ ಬೆಳಕಾಗಬೇಕೆಂಬ ಕನಸು. ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಹಿನ್ನೆಲೆಯಲ್ಲಿ ಶುರುವಾದ ಹೋರಾಟವನ್ನು ರಾಜಕೀಯ ನಾಯಕರು 'ನಾಟಕ' ಎಂದು ಕರೆದರು. ಅದು ನಾಟಕ ಅಲ್ಲ, ಬದುಕಿನ ಅಸಲಿ ಎಂದು ಗ್ರಾಮಸ್ಥರು ತೋರಿಸಿಕೊಟ್ಟರು'. ಮಹೇಶರ ಕಣ್ಣಲ್ಲಿ ಸಾರ್ಥಕ್ಯದ ಮಿಂಚು.

ರಾಜಕೀಯ ಪಕ್ಷಗಳ ಮೇಲಾಟ, ಅಜ್ಞಾತ ಹಳ್ಳಿ ರಾಜಕೀಯ, ವೈಯಕ್ತಿಕ ನಿಂದೆ, ಸುಳ್ಳು ಸುದ್ದಿಗಳು... ಇವೆಲ್ಲವನ್ನೂ ಮೀರಿ ತಾಲೂಕು ಬಿಡಿ, ಪಂಚಾಯತ್ ಮಟ್ಟದ ಚುನಾವಣೆಯಲ್ಲಿ ಸ್ಪರ್ಧಿಸುವುದೂ ಸಾಹಸ. ಸ್ಪರ್ಧಿಸಿ ವಿಜಯಿಯಾಗುವುದು ಹಿಮಾಲಯ ಏರಿದಷ್ಟು ಕಠಿಣ. ಮೊಗ್ರದ ಗ್ರಾಮಸ್ಥರು ಪಕ್ಷಾತೀತವಾಗಿ ನಾಲ್ವರನ್ನು ಆರಿಸಿದ್ದಾರೆ. ಸ್ಥಾಪಿತ ರಾಜಕೀಯ ಪಕ್ಷಗಳ ಪ್ರಖರತೆಯನ್ನು ತಾಳಿಕೊಂಡು 'ಗ್ರಾಮ ಭಾರತ'ದ ಧ್ವಜ ಊರಿದ್ದಾರೆ. ಇದಲ್ವಾ, ನಿಜವಾದ ಅಭಿವೃದ್ಧಿ.

ಪ್ರತಿಕ್ರಿಯಿಸಿ: feedback@sudha.co.in